**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–16)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 4ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ,1999(2000ರ ಕರ್ನಾಟಕ ಅಧಿನಿಯಮ 29)(ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 4ನೇ ಪ್ರಕರಣದಲ್ಲಿ,-

(i) ಖಂಡ (ಇ)ರಲ್ಲಿರುವ “ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ಅಧಿನಿಯಮ,1994ರ ಅಡಿಯಲ್ಲಿ ರಚಿತವಾದ ಬಯಲು ಸೀಮೆ ಅಭಿವೃದ್ಧಿ ಮಂಡಲಿಯಿಂದ” ಎಂಬ ಪದಗಳು ಮತ್ತು ಅಂಕಿಗಳ ತರುವಾಯ “,ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ14)ರಡಿ ರಚಿತವಾದ ಗ್ರಾಮ ಪಂಚಾಯಿತಿಗಳು ಮತ್ತು ತಾಲ್ಲೂಕು ಪಂಚಾಯಿತಿಗಳು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಡಿ ರಚಿತವಾದ ಪುರಸಭೆಗಳು ಅಥವಾ ಪಟ್ಟಣ ಪಂಚಾಯಿತಿಗಳು ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರಡಿ ರಚಿಸಲಾದ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ” ಎಂಬ ಪದಗಳು, ಅಂಕಿಗಳು, ಆವರಣ ಚಿಹ್ನೆಗಳು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಸೇರಿಸತಕ್ಕದ್ದು; ಮತ್ತು

(ii) ಖಂಡ (ಇಇ), (ಇಇಇ) ಮತ್ತು (ಎಫ್) ಗಳನ್ನು ಬಿಟ್ಟುಬಿಡತಕ್ಕದ್ದು.

**3. 6ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿ,-

(i) ಮೊದಲನೇ ಪರಂತುಕದಲ್ಲಿರುವ "1.00 ಕೋಟಿ ರೂಪಾಯಿಗಳಿಗೆ" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ "2.00 ಕೋಟಿ ರೂಪಾಯಿಗಳಿಗೆ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಮೂರನೇ ಪರಂತುಕದಲ್ಲಿ "ಪ್ರವರ್ಗ (IIಎ)ರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ತರುವಾಯ "ಮತ್ತು ಶೇಕಡಾ 4ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳೆಂದು ಪ್ರವರ್ಗ II(ಬಿ)ರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು." ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಸೇರಿಸತಕ್ಕದ್ದು.

(iii) ನಾಲ್ಕನೇ ಪರಂತುಕದಲ್ಲಿ,-

"(ಎ) "ಪ್ರವರ್ಗ-Iಕ್ಕೆ ಮತ್ತು ಸಂದರ್ಭಾನುಸಾರವಾಗಿ ಹಿಂದುಳಿದ ವರ್ಗಗಳ ಪ್ರವರ್ಗ-II(ಎ)ಗೆ" ಎಂಬ ಪದಗಳು, ಅಂಕಿಗಳು, ಮತ್ತು ಆವರಣ ಚಿಹ್ನೆಗಳ ಬದಲಿಗೆ "ಪ್ರವರ್ಗ-Iಕ್ಕೆ ಅಥವಾ ಪ್ರವರ್ಗ-II(ಎ)ಗೆ ಅಥವಾ ಸಂದರ್ಭಾನುಸಾರವಾಗಿ ಪ್ರವರ್ಗ- II(ಬಿ)ಗೆ" ಎಂಬ ಪದಗಳು, ಅಂಕಿಗಳು, ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ವಿವರಣೆಯಲ್ಲಿನ (2)ನೇ ಖಂಡದ ತರುವಾಯದ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(3) ಪ್ರವರ್ಗ- II(ಬಿ) ಎಂದರೆ ಆದಾಯ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಲ್ಲಿ ಪ್ರವರ್ಗ-II(ಬಿ) ಎಂಬುದಾಗಿ ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗ."

(iv) ನಾಲ್ಕನೇ ಪರಂತುಕದ ವಿವರಣೆಯ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳನ್ನು ಹೊರತುಪಡಿಸಿದಂತೆ, ಸರಕು ಮತ್ತು ಸೇವೆಗಳ ಸಂಗ್ರಹದ ಪೈಕಿಯ ಮೌಲ್ಯ 1.00 ಕೋಟಿ ರೂಪಾಯಿಗಳನ್ನು ಮೀರದ ಅಂಥ ಸರಕು ಮತ್ತು ಸೇವೆಗಳ ಸಂಗ್ರಹಗಳ (procurement) ವ್ಯಾಪ್ತಿಯ ಶೇಕಡ 17.15 ರಷ್ಟನ್ನು ಅನುಸೂಚಿತ ಜಾತಿಗಳಿಗೆ, ಶೇಕಡ 6.95 ರಷ್ಟನ್ನು ಅನುಸೂಚಿತ ಪಂಗಡಗಳಿಗೆ, ಶೇಕಡ 4 ರಷ್ಟನ್ನು ಪ್ರವರ್ಗ-Iಕ್ಕೆ, ಶೇಕಡ 15 ರಷ್ಟನ್ನು ಪ್ರವರ್ಗ-II(ಎ)ಗೆ ಮತ್ತು ಶೇಕಡ 4 ರಷ್ಟನ್ನು ಪ್ರವರ್ಗ-II(ಬಿ)ಗೆ ಸೇರಿದ ಟೆಂಡರುದಾರರುಗಳ ಪೈಕಿ ಅನುಕ್ರಮವಾಗಿ ಮೇಲಿನ ಪ್ರವರ್ಗಗಳಿಗೆ ಸೇರಿದವರಿಗೆ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಅದೂ ಅಲ್ಲದೇ, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಸಂದರ್ಭಾನುಸಾರ ಮೇಲಿನ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿರುವಲ್ಲಿ, ಅಂಥ ಸರಕು ಮತ್ತು ಸೇವೆಗಳ ಸಂಗ್ರಹಗಳ ಆಹ್ವಾನಗಳಿಗೆ ಪ್ರತಿಕ್ರಿಯಿಸಿದ ಇತರರ ಪೈಕಿ ಟೆಂಡರನ್ನು ನೀಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

2025-26ನೇ ವರ್ಷದ ಆಯವ್ಯಯ ಭಾಷಣದ ಖಂಡಿಕೆ 171 ಮತ್ತು 172ರಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಜಾರಿಗೊಳಿಸಲು ಮತ್ತು ಆ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಎರಡು ಕೋಟಿ ರೂಪಾಯಿಗಳವರೆಗಿನ ಒಟ್ಟು ಸರ್ಕಾರಿ ನಿರ್ಮಾಣ ಕಾಮಗಾರಿಗಳ ಪೈಕಿ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳ ಪ್ರವರ್ಗ-II(ಬಿ)ಗೆ ಸೇರಿದ ವ್ಯಕ್ತಿಗಳು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸುವುದು; ಮತ್ತು

(ii) ಅಧಿಸೂಚಿತ ಇಲಾಖೆಗಳಲ್ಲಿ ನಿರ್ಮಾಣ ಕಾಮಗಾರಿಗಳ ಹೊರತಾಗಿ ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳು ಅಥವಾ ಹಿಂದುಳಿದ ವರ್ಗಗಳಲ್ಲಿ, 1.00 ಕೋಟಿ ರೂಪಾಯಿಗಳ ಮೌಲ್ಯ ಮೀರದ ಅಂಥ ಸರಕು ಮತ್ತು ಸೇವೆಗಳ ಸಂಗ್ರಹಣೆಗಾಗಿ ಶೇಕಡಾ 17.15 ರಷ್ಟು ಅನುಸೂಚಿತ ಜಾತಿಗಳಿಗೆ, ಶೇಕಡಾ 6.95ರಷ್ಟು ಅನುಸೂಚಿತ ಪಂಗಡಗಳಿಗೆ, ಶೇಕಡಾ 15ರಷ್ಟು ಪ್ರವರ್ಗ-II(ಎ)ಗೆ ಮತ್ತು ಶೇಕಡಾ 4ರಷ್ಟನ್ನು ಪ್ರವರ್ಗ- II(ಬಿ)ಗೆ ಸೇರಿದ ವ್ಯಕ್ತಿಗಳಿಗೆ ಅಂಥ ಸಂಗ್ರಹಣೆಗಳಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿ ಮತ್ತು
ಹಣಕಾಸು ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ

## ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29)ರ ಉದ್ಧೃತ ಭಾಗ

**XXX XXX XXX**

**4. ಅನ್ವಯಿಸುವಿಕೆಗೆ ಅಪವಾದಗಳು.-** ಅಧ್ಯಾಯ IIರ ಉಪಬಂಧಗಳು,-

(ಎ) ಪ್ರಕೃತಿ ವಿಕೋಪಗಳ ಅಥವಾ ಸರ್ಕಾರವು ಘೋಷಿಸಿದ ತುರ್ತುಪರಿಸ್ಥಿತಿಯ ಅವಧಿಯಲ್ಲಿ;

(ಬಿ) ಸರಕುಗಳು ಅಥವಾ ಸೇವೆಗಳು ಏಕೈಕ ಮೂಲದಿಂದ ಲಭ್ಯವಾಗುತ್ತಿದ್ದಲ್ಲಿ ಅಥವಾ ಒಬ್ಬ ನಿರ್ದಿಷ್ಟ ಸರಬರಾಜುದಾರನು ಅಥವಾ ಕರಾರುದಾರನು, ಸರಕುಗಳ ಅಥವಾ ಸೇವೆಗಳ ಅಥವಾ ನಿರ್ಮಾಣ ಕಾಮಗಾರಿಗಳ ಸಂಬಂಧದಲ್ಲಿ ಸಂಪೂರ್ಣ ಹಕ್ಕುಗಳನ್ನು ಹೊಂದಿದ್ದಲ್ಲಿ ಮತ್ತು ಸೂಕ್ತ ಪರ್ಯಾಯಗಳು ಅಥವಾ ಬದಲಿ ವ್ಯವಸ್ಥೆಗಳು ಇರದಿದ್ದಲ್ಲಿ:

ಪರಂತು, ಈ ಖಂಡದ ಉದ್ದೇಶಕ್ಕಾಗಿ, ಸಂಗ್ರಹಣಾ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ, ಅದೇ ಬಗೆಯ ಸಂಗ್ರಹಣಾ ಕಾರ್ಯವನ್ನು ನಡೆಸುತ್ತಿರುವ ಸರ್ಕಾರಿ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ ಮತ್ತು ಸರಕುಗಳು ಅಥವಾ ಸೇವೆಗಳ ಏಕೈಕ ಮೂಲದಿಂದ ಲಭ್ಯವಾಗುತ್ತವೆ ಎಂಬುದನ್ನು ಪರೀಕ್ಷಿಸುವುದಕ್ಕೆ ಮತ್ತು ಘೋಷಿಸುವುದಕ್ಕೆ ಸಂಬಂಧಿಸಿದಂತೆ ಅಂಥ ಕ್ಷೇತ್ರದಲ್ಲಿ ಅನುಭವ ಹೊಂದಿರುವ, ಒಂದು ಪ್ರಸಿದ್ಧವಾದ ಶೈಕ್ಷಣಿಕ ಅಥವಾ ಸಂಶೋಧನಾ ಸಂಸ್ಥೆ ಅಥವಾ ವಾಣಿಜ್ಯೇತರ ಸಂಸ್ಥೆಯ ಒಬ್ಬರು ಪ್ರತಿನಿಧಿ, ಇವರನ್ನೊಳಗೊಂಡ ಮೂವರು ತಜ್ಞರು ಇರುವ ಸಮಿತಿಯೊಂದು ಇರತಕ್ಕದ್ದು.

(ಸಿ) ಸಂಗ್ರಹಣಾ ಸಂಸ್ಥೆಯು, ಸರಬರಾಜುದಾರನಿಂದ ಅಥವಾ ಕರಾರುದಾರನಿಂದ ಸರಕುಗಳನ್ನು, ಸೇವೆಯನ್ನು ಅಥವಾ ತಂತ್ರಜ್ಞಾನವನ್ನು ಸಂಗ್ರಹಣೆ ಮಾಡಿಕೊಂಡಿರುವಲ್ಲಿ, ಈಗ ಸಂಗ್ರಹಿಸಿರುವ ಸರಕುಗಳು, ಸೇವೆಗಳು ಅಥವಾ ತಂತ್ರಜ್ಞಾನದ ಉತ್ಕೃಷ್ಟತೆ ಮತ್ತು ಯುಕ್ತತೆಯ ಕಾರಣಗಳಿಗಾಗಿ ಅದೇ ಸರಬರಾಜುದಾರ ಅಥವಾ ಕರಾರುದಾರನಿಂದ ಹೆಚ್ಚುವರಿ ಸರಬರಾಜುಗಳನ್ನು ಸಂಗ್ರಹಣೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದಲ್ಲಿ;

(ಡಿ) XXX

(ಇ) ಸರ್ಕಾರದ ಇಲಾಖೆಗಳಿಂದ, ರಾಜ್ಯ ಸರ್ಕಾರದ ಉದ್ಯಮಗಳಿಂದ ಅಥವಾ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಮತ್ತು ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಲಿ, ನಿಕಾಯ ಅಥವಾ ನಿಗಮದಿಂದ ಅಥವಾ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಜಿಲ್ಲಾ ಪಂಚಾಯತ್‌ಗಳು ಅಥವಾ ಪೌರನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿ ರಚಿತವಾದ ಪೌರನಿಗಮಗಳು ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಮುನ್ಸಿಪಲ್ ಕೌನ್ಸಿಲ್‌ಗಳು ಅಥವಾ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಹೈದರಾಬಾದ್ ಪ್ರದೇಶಾಭಿವೃದ್ಧಿ ಮಂಡಲಿ; ಅಥವಾ ಮಲ್ನಾಡು ಅಭಿವೃದ್ಧಿ ಮಂಡಲಿ ಅಧಿನಿಯಮ, 1991ರ ಅಡಿಯಲ್ಲಿ ರಚಿತವಾದ ಮಲ್ನಾಡು ಅಭಿವೃದ್ಧಿ ಮಂಡಲಿ ಅಥವಾ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ಅಧಿನಿಯಮ, 1994ರ ಅಡಿಯಲ್ಲಿ ರಚಿತವಾದ ಬಯಲು ಸೀಮೆ ಅಭಿವೃದ್ಧಿ ಮಂಡಲಿಯಿಂದ,-

(i) ಯಾವುವುಗಳ ಮೌಲ್ಯವು ಐದು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಎಲ್ಲಾ ಬಗೆಯ ನಿರ್ಮಾಣ ಕಾಮಗಾರಿಗಳು ಮತ್ತು ಸಮಾಲೋಚನಾ ಸೇವೆಗಳು ಒಳಗೊಂಡಂತೆ ಸರಕುಗಳು ಮತ್ತು ಸೇವೆಗಳ ಸಂದರ್ಭದಲ್ಲಿ;

(ii) XXX

- ಸಂಗ್ರಹಣೆ ಮಾಡಲಾಗಿದ್ದಲ್ಲಿ,

(ಇಇ) ಸರಕುಗಳನ್ನು ಅಥವಾ ಸೇವೆಗಳನ್ನು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ರಚಿತವಾದ ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು, ಕರ್ನಾಟಕ ಪೌರ

ಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ರಚಿತವಾದ ಪಟ್ಟಣ ಪುರಸಭೆಗಳು ಅಥವಾ ಪಟ್ಟಣ ಪಂಚಾಯತಿಗಳು ಅಥವಾ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ,-

(i) ಯಾವುವುಗಳ ಸಂಗ್ರಹಣೆಯ ಮೌಲ್ಯವು ಎರಡು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಕಿರು ನೀರು ಸರಬರಾಜು ಯೋಜನೆಯ ಅನುಷ್ಠಾನದ ಅಥವಾ ಶಾಲಾಕೊಠಡಿಗಳ ನಿರ್ಮಾಣದ ಉದ್ದೇಶಕ್ಕಾಗಿ; ಮತ್ತು

(ii) ಯಾವುವುಗಳ ಸಂಗ್ರಹಣೆಯ ಮೌಲ್ಯವು ಒಂದು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಅಂಥ ಇತರೆ ಉದ್ದೇಶಗಳಿಗಾಗಿ,-

- ಸಂಗ್ರಹಣೆ ಮಾಡಲಾಗಿದ್ದಲ್ಲಿ.

(ಇಇಇ) ಐದು ಲಕ್ಷ ರೂಪಾಯಿಗಳಿಗೆ ಮೀರದ ಮೌಲ್ಯದ ಕುಡಿಯುವ ನೀರಿನ ಸ್ಕೀಮುಗಳ ವಿದ್ಯುದೀಕರಣದ ಮೂಲ ಸೌಲಭ್ಯ ಕಾಮಗಾರಿಗಳಿಗಾಗಿ, ರಾಜ್ಯದ ಸಂಚಿತ ನಿಧಿಯಿಂದ ಅನುದಾನವನ್ನು ಸ್ವೀಕರಿಸುವ ಸಂಗ್ರಹಣಾ ಘಟಕದ ಮೂಲಕ ಸಂಗ್ರಹಣೆಯನ್ನು ಮಾಡಲಾಗಿದ್ದ ಸಂದರ್ಭದಲ್ಲಿ;

**XXX XXX XXX**

(ಎಫ್) ಸರಬರಾಜು ಮತ್ತು ವಿಲೇವಾರಿಗಳ ಮಹಾ ನಿರ್ದೇಶಕರಿಂದ ಅಥವಾ ರಾಜ್ಯದ ಸರಕು ಖರೀದಿ ಇಲಾಖೆಯಿಂದ ಸರಕುಗಳನ್ನು ಅಥವಾ ಸೇವೆಗಳನ್ನು ಸಂಗ್ರಹಣೆ ಮಾಡಿಕೊಳ್ಳಲಾಗಿದ್ದಲ್ಲಿ;

**XXX XXX XXX**

**6. ಸಂಗ್ರಹಣ ಸಂಸ್ಥೆಗಳು ಕಾರ್ಯವಿಧಾನವನ್ನು ಅನುಸರಿಸುವುದು.-** ಈ ಅಧಿನಿಯಮದಲ್ಲಿ ಅಥವಾ ಇದರಡಿ ರಚಿಸಿದ ನಿಯಮಗಳಲ್ಲಿ ನಿರೂಪಿಸಲಾದ ಕಾರ್ಯ ವಿಧಾನಕ್ಕನುಸಾರವಾಗಿಯಲ್ಲದೆ ಈ ಅಧಿನಿಯಮದ ಪ್ರಾರಂಭದ ತರುವಾಯ ಒಂದು ಸಂಗ್ರಹಣಾ ಸಂಸ್ಥೆಯು ಯಾವುದೇ ಟೆಂಡರನ್ನು ಆಹ್ವಾನಿಸತಕ್ಕದ್ದಲ್ಲ, ಪ್ರಕ್ರಿಯೆಗೊಳಪಡಿಸತಕ್ಕದ್ದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ 1.00 ಕೋಟಿ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಶೇಕಡ 17.15ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು ಮತ್ತು ಅಂಥ ಕಾಮಗಾರಿಗಳ ಶೇಕಡ 6.95ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಮತ್ತು ಪರಂತು, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರವಾಗಿ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿದ್ದಲ್ಲಿ, ಅಂಥ ಕಾಮಗಾರಿಗಳನ್ನು ಇತರರಿಗೆ ಟೆಂಡರ್ ನೀಡಬಹುದು.

**ವಿವರಣೆ:-** ಈ ಪರಂತುಕದ ಉದ್ದೇಶಕ್ಕಾಗಿ,-

(1) "ಅನುಸೂಚಿತ ಜಾತಿಗಳು" ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರ ಭಾಗ- VII ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಜಾತಿಗಳ ಉಲ್ಲೇಖ ಹೊಂದಿರತಕ್ಕದ್ದು.

(2) "ಅನುಸೂಚಿತ ಪಂಗಡಗಳು" ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಸಂವಿಧಾನ (ಅನುಸೂಚಿತ ಪಂಗಡಗಳು) ಆದೇಶ, 1950ರ ಭಾಗ-VI ರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಅನುಸೂಚಿತ ಪಂಗಡಗಳ ಉಲ್ಲೇಖ ಹೊಂದಿರತಕ್ಕದ್ದು.

"ಅಲ್ಲದೆ ಪರಂತು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು, ಅಧಿಸೂಚಿತ ಇಲಾಖೆಗಳಲ್ಲಿ ನಿಯಮಿಸಿದ ಪ್ರಕ್ರಿಯೆಗಳನ್ನು ಅನುಸರಿಸುವ ಮೂಲಕ ಕೈಗೊಳ್ಳಬೇಕಾದ ಅಗತ್ಯ ನೋಟೀಸುಗಳು, ಪತ್ರ ವ್ಯವಹಾರಗಳು ಮತ್ತು ಪ್ರಕಟಣೆಗಳನ್ನು ಹೊರಡಿಸುವಾಗ ನಿರ್ಮಾಣ ಕಾಮಗಾರಿಗಳ ಮೌಲ್ಯ ಒಂದು ಕೋಟಿ ರೂಪಾಯಿಗಳಿಗೆ ಮೀರದ ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 4 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳೆಂದು ಪ್ರವರ್ಗ-Iರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು ಮತ್ತು ಅಂಥ ಕಾಮಗಾರಿಗಳ ಸಂಖ್ಯೆಯ ಶೇಕಡ 15 ರಷ್ಟನ್ನು ಮೀರದಂತೆ ಹಿಂದುಳಿದ ವರ್ಗಗಳೆಂದು ಪ್ರವರ್ಗ-II(ಎ)ರಲ್ಲಿ ನಿರ್ದಿಷ್ಟಪಡಿಸಿದ ಹಿಂದುಳಿದ ಜಾತಿಗಳಿಗೆ ಸೇರಿದ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರನ್ನು ನೀಡತಕ್ಕದ್ದು:

ಅದೂ ಅಲ್ಲದೆ, ಎರಡು ಬಾರಿಗಳಲ್ಲಿ ಆಹ್ವಾನಿಸಿರುವುದಕ್ಕೆ ಪ್ರತಿಕ್ರಿಯೆಯಾಗಿ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಅಥವಾ ಸಂದರ್ಭಾನುಸಾರವಾಗಿ ಹಿಂದುಳಿದ ವರ್ಗಗಳ ಪ್ರವರ್ಗ-II(ಎ)ಗೆ ಸೇರಿದ ವ್ಯಕ್ತಿಗಳಿಂದ ಟೆಂಡರ್ ಸ್ವೀಕರಿಸದಿದ್ದಲ್ಲಿ, ಅಂಥ ಕಾಮಗಾರಿಗಳನ್ನು ಇತರರಿಗೆ ಟೆಂಡರ್ ನೀಡಬಹುದು.

**ವಿವರಣೆ:-** ಮೇಲಿನ ಪರಂತುಕಗಳ ಉದ್ದೇಶಕ್ಕಾಗಿ,-

(1) "ಪ್ರವರ್ಗ-I" ಎಂದರೆ ಆದಾಯ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಲ್ಲಿ ಪ್ರವರ್ಗ-I ಎಂಬುದಾಗಿ ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗ.

(2) " ಪ್ರವರ್ಗ-II(ಎ)" ಎಂದರೆ ಆದಾಯ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳಲ್ಲಿ ಪ್ರವರ್ಗ-II(ಎ) ಎಂಬುದಾಗಿ ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗ. "

**xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 19ನೇ ಮಾರ್ಚ್ 2025

KARNATAKA LEGISLATIVE COUNCIL

ONE HUNDRED AND FIFTY FIFTH SESSION

# THE KARNATAKA TRANSPARENCY IN PUBLIC PROCUREMENTS (AMENDMENT) BILL, 2025

**(LA Bill No. 16 of 2025)**

**(As passed by the Karnataka Legislative Assembly)**

A Bill further to amend the Karnataka Transparency in Public Procurements Act, 1999.

Whereas it is expedient further to amend the Karnataka Transparency in Public Procurements Act, 1999 (Karnataka Act 29 of 2000), for the purposes hereinafter appearing;

Be it enacted by the Karnataka State Legislature in the Seventy Sixth year of the Republic of India as follows:-

**1. Short title and commencement.-** (1) This Act may be called the Karnataka Transparency in Public Procurements (Amendment) Act, 2025.

(2) It shall come into force at once.

**2. Amendment of section 4.-** In the the Karnataka Transparency in Public Procurements Act, 1999 (Karnataka Act 29 of 2000) (hereinafter referred to as the Principal Act)in section 4,-

(i) in clause (e) after the words and figures "the Bayaluseeme Development Board Act, 1994" the words and figures "Grama Panchayats and Taluk Panchayats constituted under the Karnataka Gram Swaraj and Panchayat Raj Act, 1993 (Karnataka Act 14 of 1993) , Town Municipal Councils or Town Panchayats constituted under the Karnataka Municipalities Act, 1964 (Karnataka Act 22 of 1964) or Urban Development Authorities constituted under the Karnataka Urban Development Authorities Act, 1987(Karnataka Act 34 of 1987) " shall be inserted; and

(ii) clauses (ee), (eee) and (f) shall be omitted.

**3. Amendment of section 6.-** In the Principal Act, in section 6,-

(i) in the first proviso, for the letters and figures "Rs.1.00 crore", the letters and figures "Rs.2.00 crores", shall be substituted.

(ii) in the third proviso, after the word, figures and letter “Category-IIA”, the words, figures, brackets and letter “and 4 percent be tendered only among the tenderers belonging to the Backward Castes as specified in Category II(B)”, shall be inserted.

(iii) in fourth proviso,-

(a) for the words, figures, letters and brackets “Category-I and Category-II(A)” the words, figures, letters, brackets and punctuation “Category-I, Category-II(A) and Category II(B)”, shall be substituted; and

(b) in the Explanation, after clause (2), the following shall be inserted, namely:-

“(3) Category-II(B) shall mean the Backward Classes specified as Category-II(B) in the orders issued by the State Government from time to time without considering the income criteria.”

(iv) after the explanation to the fourth proviso, the following shall be inserted, namely:-

“Provided also that, the tender inviting authority shall, in the notified Departments, out of procurement of goods and services excluding construction works, the value of which does not exceed Rs.1.00 crore, such procurement of goods and services to the extent of 17.15 percent to Scheduled Castes, 6.95 percent to Scheduled Tribes, 4 percent to Category I, 15 percent to Category II(A) and 4 percent to Category II(B) be tendered only among the tenderers belonging to the above Categories respectively, by taking out notices, communications and publications required to be taken following the prescribed procedures.

Provided also that, if no tender from persons belonging to the above categories as the case may be, is received in response to the invitation in two attempts such procurement of goods and services may be tendered among others.”

## STATEMENT OF OBJECTS AND REASONS

**(As appended to at the time of Introduction)**

It is considered necessary further to amend the Karnataka Transparency in Public Procurements Act, 1999 (Karnataka Act 29 of 2000) to give effect to the proposals made in the para 171 and 172 of Budget Speech for the year 2025-2026 and thereby overcome the unemployment problem,-

(i) in the Backward Classes and to encourage their participation in such number of constructions works, not exceeding 4 percent for the persons belonging to the Category II(B) of Backward Classes out of the total number of Government construction works upto rupees two crores;

(ii) in the Scheduled Castes or Scheduled Tribes or the Backward Classes in the procurement of goods and services excluding construction works in the notified Departments, the value of which does not exceed Rs.1.00 crore and to encourage their participation in such procurement to the extent of 17.15 percent for persons belonging to the Scheduled Castes, 6.95 percent for the persons belonging to the Scheduled Tribes, 4 percent to Category I, 15 percent to Category II(A) and 4 percent to Category II(B).

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SIDDARAMAIAH**
Chief Minister and
Minister for Finance

**K.R. MAHALAKSHMI**
Secretary
Karnataka Legislative Council

**ANNEXURE**
**Extract of the Karnataka Transparency in Public Procurement Act, 1999 (Karnataka Act No. 29 of 2000)**

**XXX XXX XXX**

**4. Exceptions to applicability.-** The provisions of Chapter II shall not apply to Procurement of goods and services,-

(a) During the period of natural calamity or emergency declared by the Government ;

(b) Where the goods or services are available from a single source or where a particular supplier or contractor has exclusive rights in respect of the goods or services or construction work and no reasonable alternatives or substitutes exist: Provided that for the purpose of this clause there shall be a committee of three experts consisting of one technical representative of the procuring entity one technical representative of the Government organisation dealing with similar procurement and one representative from a reputed Academic or Research Institution or Non-Commercial Institution having expertise in such line to examine and declare that the goods or services are available from a single source;

(c) Where the procuring entity having procured goods, services or technology from a supplier or contractor determines that additional supplies must be procured from the same supplier or contractor for reasons of standardization and compatibility with the existing goods, service or technology;

(d)XXX

(e) Where the procurement is by the Government Departments, State Government Undertakings, or any Board, Body or Corporation established by or under any law and owned or controlled by the Government or Zilla Panchayats constituted under the Karnataka Panchayat Raj Act, 1993 or City Municipal Corporations established under the Municipal Corporations Act, 1976 or City Municipal Councils established under the Karnataka Muncipalies Act, 1964 or the Hyderabad Karnataka Areas Development Board constituted under the Hyderabad Karnataka Area Development Board Act, 1993 or Malnad Area Development Board constituted under the Malnad Area Development Board Act, 1991 or the Bayaluseeme Development Board constituted under the Bayaluseeme Development Board Act, 1994,-

(i) in case of goods and services including construction works and consultancy services of all types the value of which does not exceed rupees five lakhs;

(ii) x x x

(ee) where the procurement of goods or services is by the Grama Panchayats and Taluk Panchayats constituted under the Karnataka Panchayat Raj Act, 1993, Town Municipal Councils or Town Panchayats constituted under the Karnataka Municipalities

Act, 1964 or Urban Development Authorities constituted under the Karnataka Urban Development Authorities Act, 1987,-

(i) for the purpose of implementing mini water supply scheme or construction of school rooms and the value of such procurement does not exceed rupees two lakhs; and

(ii) for other purposes and the value of such procurement does not exceed rupees one lakh.

(eee) Where the procurement is by the procurement entity receiving grant from the consolidated fund of the State, in case of Infrastructure works of electrification of drinking water schemes the value of which does not exceed rupees five lakhs;

**XXX XXX XXX**

(f) Where the goods or services are procured under rate contracts from the Director General of Supplies and Disposals or from the Stores Purchase Department of the State;

**XXX XXX XXX**

**6. Procurement Entities to follow Procedure.-** No tender shall be invited, processed or accepted by a Procurement Entity after the commencement of this Act except in accordance with the procedure laid down in this Act or the rules made thereunder.

Provided that, the tender inviting authority shall, in the notified Departments out of those construction works, value of which does not exceed Rs.1.00 crore such number of works not exceeding 17.15 percent be tendered only among the tenderers belonging to the Scheduled Castes Category and such number of works not exceeding 6.95 percent be tendered only among tenderers belonging to the Scheduled Tribes Category, by taking out notices, communications and publications required to be taken following the prescribed procedures:

Provided further that, if no tender from persons belonging to the Scheduled Castes or Scheduled Tribes as the case may be, is received in response to the invitation in two attempts such works may be tendered among others.

**Explanation:-** For the purpose of this proviso,-

(1) "Scheduled Castes" shall have reference to the Scheduled Castes specified in part VII of the Constitution (Scheduled Castes) Order, 1950 made under Article 341 of the Constitution of India and as amended from time to time;

(2) "Scheduled Tribes" shall have reference to the Scheduled Tribes specified in part VI of the Constitution (Scheduled Tribes) Order, 1950 made under Article 342 of the Constitution of India and as amended from time to time;

Provided also that, the tender inviting authority shall, in the notified Departments out of those construction works, value of which does not exceed rupees one crore such number of works not exceeding 4 percent be tendered only among the tenderers belonging to the backward castes as specified in Category-I as Backward Classes and such number of works not exceeding 15 percent to be tendered only among tenderers belonging to

backward castes as specified in Category II(A) as Backward Classes notified by the Government, by taking out notices, communications and publications required to be taken following the prescribed procedures:

Provided also that, if no tender from persons belonging to the Category-I and Category II(A) of Backward Classes as the case may be, is received in response to the invitation in two attempts such works may be tendered among others.

**Explanation:** For the purpose of above provisos,-

(1) Category-I shall mean the backward classes specified as Category-I in the orders issued by the State Government from time to time without considering the income criteria.

(2) Category-II (A) shall mean the backward classes specified as Category-II (A) in the orders issued by the State Government from time to time without considering the income criteria.

**XXX** **XXX** **XXX**

Govt. Press, Vikasa Soudha, Bengalur, 19th Mar, 2025, P7, W.D. , Copies 300